16-12-24

(35)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

**ಪ್ರಶ್ನೆ:**

"ಪತಿ-ಪತ್ನಿ ಪ್ರಕರಣದಲ್ಲಿ ಟ್ರಾನ್ಸ್‌ಫರ್ ಮಾಡ್ತಿಲ್ಲ ಎಂದು ಆಕ್ರೋಶ | ಮಧ್ಯಪ್ರವೇಶಕ್ಕೆ ರಾಜ್ಯಪಾಲರಿಗೂ ಮನವಿ 7 ವರ್ಷದಿಂದ ಪೊಲೀಸರ ವರ್ಗಾವಣೆ ಗೋಳು ಕೇಳೋರಿಲ್ಲ! " ಎಂಬ ಶೀರ್ಷಿಕೆಯಡಿ ದಿನಾಂಕ 09/12/2024ರ ಉದಯವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಕಾನೂನು ಸುವ್ಯವಸ್ಥೆ ಕಾಪಾಡಲು ಹಗಲಿರುಳು ಶ್ರಮಿಸುವ ಕಾನ್‌ಸ್ಟೆಬಲ್‌ಗಳ ಗೋಳು ಕೇಳುವವರಿಲ್ಲದಂತಾಗಿದೆ. ಪತಿ-ಪತ್ನಿ ಪ್ರಕರಣ ಹಾಗೂ ಪರಸ್ಪರ ವರ್ಗಾವಣೆ ವಿಚಾರವಾಗಿ ಕಾನ್ ಸ್ಟೆಬಲ್‌ಗಳ ಮನವಿಗೆ ಕಿವಿಗೊಡದ ಸರ್ಕಾರ ಹಾಗೂ ಪೊಲೀಸ್ ಇಲಾಖೆ ವಿರುದ್ಧ ಆಕ್ರೋಶ ಮುಂದುವರಿದಿದೆ. ವರ್ಗಾವಣೆ ವಿಚಾರದಲ್ಲಿ ಮಧ್ಯಪ್ರವೇಶಿಸುವಂತೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿರುವ ಜತೆಗೆ ಪ್ರತಿಭಟನೆ ನಡೆಸಲು ಪೊಲೀಸ್ ಕುಟುಂಬಗಳು ಸಿದ್ಧತೆ ನಡೆಸಿದ್ದಾರೆ.

7 ವರ್ಷ ಸೇವೆ ಪೂರೈಸಿರುವವರನ್ನು ಅಂತರ-ಜಿಲ್ಲಾ ವರ್ಗಾವಣೆ ಮಾಡುವುದಾಗಿ ಪೊಲೀಸ್ ಇಲಾಖೆ ಮಾರ್ಗಸೂಚಿ ಪ್ರಕಟಿಸಿತ್ತು. ಆದರೆ ಆ ವರ್ಗಾವಣೆ ಸಮಯದಲ್ಲಿ 10 ವರ್ಷ ಸೇವಾವಧಿ ಮುಗಿಸಿರುವ 47 ಕಾನ್‌ಸ್ಟೆಬಲ್‌ಗಳನ್ನು ಮಾತ್ರವೇ ವರ್ಗಾವಣೆಗೊಳಿಸಿತ್ತು. ಪತಿ-ಪತ್ನಿ ಒಂದೇ ಜಿಲ್ಲೆಯಲ್ಲಿ ಕೆಲಸ ಮಾಡಲು 7 ವರ್ಷದಿಂದ ವರ್ಗಾವಣೆಗಾಗಿ ಕಾಯುತ್ತಿದ್ದವರಿಗೆ ಸರ್ಕಾರ "ಕೈ" ಕೊಟ್ಟಿತ್ತು. ಪತಿ-ಪತ್ನಿ ಪ್ರಕರಣಗಳನ್ನು ಮೊದಲ ಆದ್ಯತೆಯಾಗಿ ಪರಿಗಣಿಸುವುದಾಗಿ ಹೇಳಿ ಇಲಾಖೆ ಸುಮ್ಮನಾಗಿರುವ ಬಗ್ಗೆ ಸಿಬ್ಬಂದಿ ಕೋಪಗೊಂಡಿದ್ದಾರೆ.

ಸಿಬ್ಬಂದಿ ಪರಸ್ಪರ ವರ್ಗಾವಣೆಯಿಂದ ಎರಡು ಜಿಲ್ಲೆಗಳಲ್ಲೂ ರಿಕ್ತ (ಖಾಲಿ) ಸ್ಥಾನದ ಸಮಸ್ಯೆ ಆಗಲ್ಲ. ಸ್ವಂತ ಖರ್ಚಿನಲ್ಲಿ ವರ್ಗಾವಣೆಯಾಗುವುದರಿಂದ ಪರಸ್ಪರ ಇಲಾಖೆಗೂ ಆರ್ಥಿಕ ನಷ್ಟವಿಲ್ಲ. ಅಂತಹವರನ್ನೂ ವರ್ಗಾವಣೆ ಮಾಡಲು ಇಲಾಖೆಯ ಹಿರಿಯ ಅಧಿಕಾರಿಗಳು ಮೀನಮೇಷ ಎಣಿಸುತ್ತಿದ್ದಾರೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಪತಿ-ಪತ್ನಿ ಪ್ರಕರಣದಲ್ಲಿ 7 ವರ್ಷ ಪೂರೈಸಿದವರನ್ನು ವರ್ಗಾವಣೆಗೊಳಿಸುವಂತೆ ಗೃಹಸಚಿವ ಡಾ.ಜಿ.ಪರಮೇಶ್ವರ ಹಲವು ಬಾರಿ ಆಡಳಿತ ವಿಭಾಗದ ಎಡಿಜಿಪಿ ಅವರಿಗೆ ಲಿಖಿತ ಪತ್ರ ಕಳುಹಿಸಿದ್ದರೂ ಪ್ರಯೋಜನವಾಗಿಲ್ಲ. ಪತಿ-ಪತ್ನಿ ದೂರ ದೂರ ಇರುವುದರಿಂದ ಕರ್ತವ್ಯದಲ್ಲಿ ದಕ್ಷತೆ ಕಡಿಮೆ ಆಗಿರುವುದರ ಜೊತೆಗೆ, ಒತ್ತಡದಲ್ಲಿ ಕೆಲಸ ಮಾಡುವುದರಿಂದ ದಿನೇದಿನೆ ಕೌಟುಂಬಿಕ ಕಲಹ ಜಾಸ್ತಿಯಾಗಿದೆ. ಪತಿ-ಪತ್ನಿ ಒಂದೇ ಕಡೆ ಕರ್ತವ್ಯ ನಿರ್ವಹಿಸಬೇಕೆಂಬ ಸುಪ್ರೀಂ ಕೋರ್ಟ್ ಆದೇಶಕ್ಕೂ ಮಾನ್ಯತೆ ಇಲ್ಲದಂತಾಗಿದ್ದು, ಕಾನ್‌ಸ್ಟೇಬಲ್‌ಗಳ ಕುಟುಂಬದವರ ಹಿತದೃಷ್ಟಿಯಿಂದ ಸರ್ಕಾರ ಪೊಲೀಸ್ ಇಲಾಖೆಯ ವರ್ಗಾವಣೆಯಲ್ಲಿ ಪತಿ-ಪತ್ನಿ ಪ್ರಕರಣಗಳಿಗೆ ಮುಕ್ತ ಅವಕಾಶ ನೀಡಬೇಕೆಂದು ಮಾನ್ಯ ಗೃಹ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಅಧಿಕಾರಿ/ಸಿಬ್ಬಂದಿಗಳಿಗೆ ಅಂತರ್ ವಲಯ ಹಾಗೂ ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆಗೆ ಅವಕಾಶ ಕಲ್ಪಿಸುವ ಸಲುವಾಗಿ ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು 2022 ಅನ್ನು ರೂಪಿಸಿ ದಿನಾಂಕ: 22.02.2023 ರಿಂದ ಜಾರಿಗೆ ತರಲಾಗಿರುತ್ತದೆ ಹಾಗೂ ಸದರಿ ನಿಯಮಗಳಲ್ಲಿ ಕರ್ನಾಟಕ ಸಾಮಾನ್ಯ ನೇಮಕಾತಿ ನಿಯಮಗಳ-1977ರ ನಿಯಮ 16(ಎ) ಪುನರ್ ಸೇರ್ಪಡೆ ನಿಯಮಗಳನ್ನು ಅಳವಡಿಸಲಾಗಿರುತ್ತದೆ**(ಅನುಬಂಧ-ಎ)**.

ಪತಿ ಪತ್ನಿ ಪ್ರಕರಣಗಳ ವರ್ಗಾವಣೆಗಳನ್ನು ಪರಿಗಣಿಸುವ ಉದ್ದೇಶದಿಂದಲೇ ಸರ್ಕಾರವು ಅಧಿಸೂಚನೆ ಸಂಖ್ಯೆ:ಸಿಆಸುಇ 215 ಸೆನೇನಿ 2022 ದಿನಾಂಕ: 09.03.2023 ರಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ಕ್ಕೆ ನಿಯಮ 16ಎ ಅನ್ನು ಪುನರ್ ಸೇರ್ಪಡೆ ಮಾಡಿರುತ್ತದೆ. ಈ ಪುನರ್ ಸೇರ್ಪಡೆ ಅಧಿಸೂಚನೆಯಲ್ಲಿ ಪತಿ-ಪತ್ನಿ ಇಬ್ಬರೂ ಸರ್ಕಾರಿ ಸೇವೆಯಲ್ಲಿ ಇರುವ ಪ್ರಕರಣಗಳಿಗೆ ಮಾತ್ರ ಈ ಕೆಳಕಂಡ ಷರತ್ತಿಗೆ ಒಳಪಟ್ಟು ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ **(ಅನುಬಂಧ-ಬಿ)**.

- ಒಬ್ಬ ಸರ್ಕಾರಿ ನೌಕರನು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಕನಿಷ್ಟ 07 ವರ್ಷ ಸೇವೆಯನ್ನು ಪೂರ್ಣಗೊಳಿಸಿರಬೇಕು.
- ವರ್ಗಾಯಿಸಬೇಕಾದ ಘಟಕ ಅಥವಾ ಸ್ಥಳದಲ್ಲಿ ಮಂಜೂರಾದ ಹುದ್ದೆಯು ಖಾಲಿಯಿರತಕ್ಕದ್ದು.
- ಅಂತಹ ವರ್ಗಾವಣೆಯನ್ನು ಒಂದು ಕೇಡರ್‌ನಿಂದ ಮತ್ತೊಂದು ಕೇಡರಿಗೆ ಮಾಡತಕ್ಕದಲ್ಲ.
- ವರ್ಗಾವಣೆಯನ್ನು ಸರ್ಕಾರಿ ನೌಕರನ ಕೋರಿಕೆ ಮೇಲೆ ಮಾಡಿರುವುದರಿಂದ ಅವರ ಜೇಷ್ಠತೆಯನ್ನು ವರ್ಗಾವಣೆಗೊಂಡ ಘಟಕದಲ್ಲಿನ ಕೇಡರ್‌ನ ಕೊನೆಯ ವ್ಯಕ್ತಿಯ ಕೆಳಗಿರಿಸತಕ್ಕುದ್ದು.
- ವರ್ಗಾವಣೆಯನ್ನು ಸರ್ಕಾರಿ ನೌಕರನ ಸೇವೆಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮಾಡತಕ್ಕುದಲ್ಲ.

ಇಲಾಖೆಯ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ವಿಶೇಷ ನಿಯಮಗಳ ಅಡಿಯಲ್ಲಿ ವರ್ಗಾವಣೆಗಳನ್ನು ಮಾಡಲು ಸರ್ಕಾರವು ಆದೇಶ ಸಂಖ್ಯೆ: ಒಇ 93 ಪಿಪಿಎಸ್ 2022, ದಿನಾಂಕ: 15.07.2024 ರಂದು ಮಾರ್ಗಸೂಚಿಯನ್ನು ಸಹ ಹೊರಡಿಸಿರುತ್ತದೆ **(ಅನುಬಂಧ-ಸಿ)** ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿರುವಂತೆ ಆನ್‌ಲೈನ್ ಪೋರ್ಟಲ್‌ನಲ್ಲಿ ಸಲ್ಲಿಕೆಯಾಗುವ ಮನವಿಗಳನ್ನು ವರ್ಗಾವಣೆ ಬಯಸುವ ಘಟಕದಲ್ಲಿನ ರಿಕ್ತ ಸ್ಥಾನವು ಶೇಕಡಾ 15ನ್ನು ಮೀರದಿರುವ ನಿರ್ಬಂಧನೆ ಹಾಗೂ ಪ್ರತಿ ವೃಂದದಲ್ಲಿನ ಸೇವಾ ಜ್ಯೇಷ್ಠತೆಯ ಆಧಾರದ ಮೇಲೆ ಮಾತ್ರ ಪರಿಗಣಿಸಲಾಗುತ್ತಿದ್ದು, ಮೊದಲನೆ ಆದ್ಯತೆಯನ್ನು ಪತಿ-ಪತ್ನಿ ಪ್ರಕರಣಕ್ಕೆ ನೀಡಲಾಗುತ್ತದೆ.

ಸದರಿ ಸರ್ಕಾರದ ಆದೇಶಗಳನ್ವಯ ರಿಕ್ತಸ್ಥಾನದ ಲಭ್ಯತೆ ಉಭಯ ಘಟಕಗಳ ಸಹಮತಿ ಮತ್ತು ಸೇವಾ ಜ್ಯೇಷ್ಠತೆಯ ಆಧಾರದ ಮೇಲೆ ಈವರೆಗೂ 168 ಸಿಬ್ಬಂದಿಗಳ ವರ್ಗಾವಣೆಗಳನ್ನು ಮಾಡಲಾಗಿದ್ದು, ಅದರಲ್ಲಿ 86 ಸಿಬ್ಬಂದಿಗಳನ್ನು ಪತಿ-ಪತ್ನಿ ಪ್ರಕರಣದಡಿಯಲ್ಲಿ ವರ್ಗಾವಣೆ ಮಾಡಲಾಗಿರುತ್ತದೆ. ಸೇವಾ ಜೇಷ್ಠತೆಯಲ್ಲಿ ಅಂತರ ಜಿಲ್ಲಾ ವರ್ಗಾವಣೆ ಕೋರಿ ಇಲಾಖೆಯಲ್ಲಿ ಸ್ವೀಕೃತವಾಗಿರುವ ವರ್ಗಾವಣಾ ಅರ್ಜಿಗಳನ್ನು ಇಲಾಖೆಯ ಆಡಳಿತ ನಿರ್ವಹಣೆ ಹಾಗೂ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ಧಕ್ಕೆಯಾಗದ ರೀತಿಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು 2022 ದಿನಾಂಕ: 22.02.2023 ಹಾಗೂ ಆದೇಶ ಸಂಖ್ಯೆ: ಒಇ 93 ಪಿಪಿಎಸ್ 2022, ದಿನಾಂಕ: 15.07.2024 ರನ್ವಯ ಹಂತಹಂತವಾಗಿ ಪತಿ-ಪತ್ನಿ ಪ್ರಕರಣದ ಸಿಬ್ಬಂದಿಗಳನ್ನು ವರ್ಗಾವಣೆಗೆ ಪರಿಗಣಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ಹೆಚ್‌ಡಿ 323 ಪಿಪಿಎಸ್ 2024**

**(ಡಾ: ಜಿ. ಪರಮೇಶ್ವರ)**
**ಗೃಹ ಸಚಿವರು**

ಅನುಬಂಧ-೨

**GOVERNMENT OF KARNATAKA**

**No.** HD/93/PPS/2022

Karnataka Government Secretariat
Vidhana Soudha,
Bengaluru, Dated:22.02.2023

**NOTIFICATION**

Whereas the draft of the Karnataka State Police Department (Transfer) (Special) Rules, 2022 was published as required by clause (a) of sub-section (2) of section 3 read with section 8 of the Karnataka State Civil Services Act, 1978, (Karnataka Act 14 of 1990) in Notification No. HD/93/PPS/2022, dated:28.12.2022 in Part IV-A, No.618 of the Karnataka Gazette Extra- ordinary dated:28.12.2022, inviting objections or suggestions from all thepersons likely to be affected within fifteen days from the date of its publication in the Official Gazette.

Whereas, the said Gazette was made available to the public on 28.12.2022;

And whereas objections and suggestions received in this behalf have been Considered by State Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act No. 14 of 1990), the Government of Karnataka, hereby makes the following rules, namely:-

**RULES**

**1. Title and commencement.-** (1) These rules may be called theKarnataka State Police Department (Transfer) (Special) Rules, 2022.

(2) They shall come into force from the date of their final publicationin the Official Gazette.

**2. Application of these rules.-** Notwithstanding anything contained in the Karnataka Civil Services (General Recruitment) Rules, 1977, these rules shall be applicable in case of method to be followed while transferring the PSI (Civil/CAR/DAR), ASI/HC(Civil/CAR/DAR), Police Constable: (Civil and CAR/DAR) and F.D.A/S.D.A/DALAYATHS AND OTHER GROUP 'D' EMPLOYEES of Police Department from one district/unit to another district/unit or from one Range/Commissionarate to another Range/Commissionarate.

**3. Method of Transfer.-** The following method of transfer shall be followed in case of,-

**(1) Police Sub Inspector (Civil/CAR/DAR) or equivalent post**

(i) In cases where both husband and wife are in Government service and a request for transfer under these rules is made by a spouse, from a post in one unit of seniority in a Range/Commissionarate to an identical post in the same cadre in another unit of seniority in another Range/Commissionarate, the competent authority can consider the request for transfer subject to the following conditions, namely:-

(a) the PSI (Civil/CAR/DAR) must have satisfactorily completed the probationary period; and

(b) the provision of rule 16-A of and the general instructions that may be issued by the Government from time to time under the Karnataka Civil Services (General Recruitment) Rules, 1977 shall apply mutatis mutandis to such request for transfer.

(ii) the PSI (Civil/CAR/DAR) who is an Ex-service men, he must have completed minimum period of three years service and must have satisfactorily completed the probationary period.

(iii) Sanctioned post shall be vacant and available in the unit or place to be transferred in a Range/Commissionarate.

(iv) Such transfer shall not be permissible from one cadre to another cadre.

(v) Since the appointment being made at the request of the Government servant his seniority shall be placed below that of the last person in the cadre of the transferred unit or place in a Range/Commissionarate.

**(2) Assistant Sub Inspector/Head Constable (Civil/CAR/DAR) or equivalent post**

(i) The inter-district transfer request shall be considered after promotion of the all police men of equivalent rank and batch who are serving in the recipient district/unit before the joining date of the applicant.

(ii) By placing him below the last person in that cadre in the seniority list of the unit at the time of joining to which he is transferred.

(iii) Availability of vacancies.

(iv) Shall be holding equivalent post in the District/Commissionate.

(v) In cases where both husband and wife are in Government service and a request for transfer under these rules is made by a spouse, from a post in one unit of seniority in a Range/Commissionarate to an identical post inthe same cadre in another unit of seniority in another Range/Commissionarate, the competent authority can consider the request for transfer subject to the following conditions, namely:-

(a) the Assistant Sub Inspector/Head Constable (Civil/CAR/DAR) must have satisfactorily completed the probationary period; and

(b) the provision of rule 16-A of and the general instructions that may be issued by the Government from time to time under the Karnataka Civil Services (General Recruitment) Rules, 1977 shall apply mutatis mutandis to such request for transfer.

**(3) Police Constable: (Civil and CAR/DAR)**

(i) Must of have completed minimum period of Seven years service.

(ii) He shall be placed below the last person in that cadre in the seniority list of the unit at the time of reporting/joining to which he is transferred.

(iii) In case of Ex-servicemen he should have completed minimum period of three years service and satisfactorily completed his probation period.

(iv) In cases where both husband and wife are in Government service and a request for transfer under these rules is made by a spouse, from a post in one unit of seniority in a Range/Commissionarate to an identical post in the same cadre in another unit of seniority in another Range/Commissionarate, the competent authority can consider the request for transfer subject to the following conditions, namely:-

(a) the Police Constable: (Civil and CAR/DAR) must have satisfactorily completed the probationary period; and

(b) the provision of rule 16-A of and the general instructions that may be issued by the Government from time to time under the Karnataka Civil Services (General Recruitment) Rules, 1977 shall apply mutatis mutandis to such request for transfer.

(v) Sanctioned post shall be vacant and available in the unit or place to be transferred in a Range/Commissionarate.

(iv) Such transfer shall not be permissible from one cadre to another cadre.

(v) Since the appointment being made at the request of the Government servant his seniority shall be placed below that of the last person in the cadre of the transferred unit or place in a Range/Commissionarate.

**(4) First Division Assistant/Second Division Assistant/DALAYATHS AND OTHER GROUP 'D' EMPLOYEES:**

(i) He shall be placed below the last person in that cadre in the seniority list of the unit at the time of reporting/joining to which he is transferred.

(ii) In cases where both husband and wife are in Government service and a request for transfer under these rules is made by a spouse, from a post in one unit of seniority in a Range/Commissionarate to an identical post in the same cadre in another unit of seniority in another Range/Commissionarate, the competent authority can consider the request for transfer subject to the following conditions, namely:-

(a) the F.D.A/S.D.A/DALAYATHS AND OTHER GROUP 'D' EMPLOYEE must have satisfactorily completed the probationary period; and

(b) the provision of rule 16-A of and the general instructions that may be issued by the Government from time to time under the Karnataka Civil Services (General Recruitment) Rules, 1977 shall apply mutatis mutandis to such request for transfer.

(iii) Sanctioned post shall be vacant and available in the unit or place to be transferred in a Range/Commissionarate.

(iv) Such transfer shall not be permissible from one cadre to another cadre.

(v) Since the appointment being made at the request of the Government servant his seniority shall be placed below that of the last person in the cadre of the transferred unit or place in a Range/Commissionarate.

By order and in the name of
the Governor of Karnataka,

**(G. Shyama Holla)**
Under Secretary to Government,
Department of Home (Police Services-B)

ಅನುಬಂಧ-೭



ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 215 ಸೇನೆನಿ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:09.03.2023.

## ಅಧಿಸೂಚನೆ

ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಅಧಿನಿಯಮ ಸಂಖ್ಯೆ: 14)ರ 3ನೇ ಪ್ರಕರಣದ 2 (ಎ) ಉಪ ಪ್ರಕರಣವನ್ನು ಪ್ರಕರಣ 8ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ, ಕರಡು ನಿಯಮಗಳನ್ನು ದಿನಾಂಕ:21.12.2022ರ ರಾಜ್ಯ ಪತ್ರದ ವಿಶೇಷ ಸಂಚಿಕೆಯ ಭಾಗ IV-ಎ (ನಂ-611) ರಲ್ಲಿ ಅಧಿಸೂಚನೆ ಸಂಖ್ಯೆ: ಸಿಆಸುಇ 215 ಸೆನೆನಿ 2022, ದಿನಾಂಕ: 21.12.2022ರಲ್ಲಿ ಪ್ರಕಟಿಸಿ ಅದರಿಂದ ಬಾಧಿತರಾಗಬಹುದಾದಂತಹ ವ್ಯಕ್ತಿಗಳಿಂದ ಅಧಿಕೃತ ರಾಜ್ಯಪತ್ರದಲ್ಲಿ ಆ ಕರಡು ನಿಯಮಗಳು ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿರುವುದರಿಂದ,

ಸದರಿ ರಾಜ್ಯಪತ್ರವನ್ನು ದಿನಾಂಕ: 21ನೇ ಡಿಸೆಂಬರ್ 2022 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿರುವುದರಿಂದ,

ಮತ್ತು ಸ್ವೀಕೃತವಾಗಿರುವ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ,

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಅಧಿನಿಯಮ ಸಂಖ್ಯೆ: 14)ರ 3ನೇ ಪ್ರಕರಣದ 1ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳು, 2023 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 16-A ಅನ್ನು ಸೇರ್ಪಡೆಗೊಳಿಸುವ ಬಗ್ಗೆ:-** ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 16ರ ನಂತರ ಈ ಕೆಳಕಂಡಂತೆ ಸೇರಿಸತಕ್ಕದ್ದು ಎಂದರೆ :-

"**16-ಎ. ಸೇವೆಯೊಳಗೆ ವರ್ಗಾವಣೆ ಮೂಲಕ ನೇಮಕ ಮಾಡುವುದು.-**
ಈ ನಿಯಮಗಳಲ್ಲಿ ಅಥವಾ ಯಾವುದೇ ಸೇವೆಯ ಅಥವಾ ಹುದ್ದೆಯ ಸಂಬಂಧದಲ್ಲಿ ರಚಿಸಲಾದ ವಿಶೇಷ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಒಬ್ಬ ಇಲಾಖಾ ಮುಖ್ಯಸ್ಥರು ಸೇವೆಗೆ ಸಂಬಂಧಿಸಿದಂತೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಮತ್ತು ಈ ಬಗ್ಗೆ ಸರ್ಕಾರವು ಹೊರಡಿಸುವ ಸಾಮಾನ್ಯ ಸೂಚನೆಗಳಿಗೆ ಒಳಪಟ್ಟು, ಪತಿ-ಪತ್ನಿ ಇಬ್ಬರೂ ಸರ್ಕಾರಿ ಸೇವೆಯಲ್ಲಿರುವ ಪ್ರಕರಣಗಳಲ್ಲಿ ಮಾತ್ರ ಗುಂಪು-ಸಿ ಅಥವಾ ಗುಂಪು-ಡಿ ಸೇವೆಗೆ ಸೇರಿದ ಒಬ್ಬ ಸದಸ್ಯರನ್ನು, ಮತ್ತು ಈ ನಿಯಮಗಳಡಿ ಪತಿ ಅಥವಾ

No. KARBIL/2001/47147 POSTAL REGN. No. RNP/KA/BGS/2202/2017-19
sed to post without prepayment WPP No. 297



ಪತ್ನಿ ಇವರಲ್ಲಿ ಯಾರಾದರೊಬ್ಬರಿಂದ ಕೋರಿಕೆ ಬಂದಲ್ಲಿ, ಹುದ್ದೆಯ ಒಂದು ಜೇಷ್ಠತಾ ಘಟಕದಿಂದ ಮತ್ತೊಂದು ಜೇಷ್ಠತಾ ಘಟಕದಲ್ಲಿನ ಅದೇ ಕೇಡರ್‌ನ ಸಮಾನ ಹುದ್ದೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವರ್ಗಾವಣೆ ಮೂಲಕ ನೇಮಕ ಮಾಡಬಹುದು. ಅವುಗಳೆಂದರೆ:-

i) ಒಬ್ಬ ಸರ್ಕಾರಿ ನೌಕರನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಕನಿಷ್ಠ 7 ವರ್ಷ ಸೇವೆಯನ್ನು ಪೂರ್ಣಗೊಳಿಸಿರಬೇಕು.

ii) ವರ್ಗಾಯಿಸಬೇಕಾದ ಘಟಕ ಅಥವಾ ಸ್ಥಳದಲ್ಲಿ ಮಂಜೂರಾದ ಹುದ್ದೆಯು ಖಾಲಿಯಿರತಕ್ಕದ್ದು.

iii) ಅಂತಹ ವರ್ಗಾವಣೆಯನ್ನು ಒಂದು ಕೇಡರ್‌ನಿಂದ ಮತ್ತೊಂದು ಕೇಡರಿಗೆ ಮಾಡತಕ್ಕದ್ದಲ್ಲ.

**ಟಿಪ್ಪಣಿ:** ಈ ನೇಮಕಾತಿಯನ್ನು ಸರ್ಕಾರಿ ನೌಕರರ ಕೋರಿಕೆಯ ಮೇರೆಗೆ ಮಾಡುವುದರಿಂದ ಅವರ ಜೇಷ್ಠತೆಯನ್ನು ವರ್ಗಾವಣೆಗೊಂಡ ಘಟಕದಲ್ಲಿನ ಕೇಡರ್‌ನ ಕೊನೆಯ ವ್ಯಕ್ತಿಯ ಕೆಳಗಿರಿಸತಕ್ಕದ್ದು .

ಪರಂತು, ವರ್ಗಾವಣೆಯ ಮೂಲಕ ಅಂತಹ ನೇಮಕಾತಿಯನ್ನು ಸರ್ಕಾರಿ ನೌಕರನ ಸೇವೆಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮಾಡತಕ್ಕದ್ದಲ್ಲ.

**ವಿವರಣೆ:** ಈ ನಿಯಮದ ಉದ್ದೇಶಕ್ಕಾಗಿ "ಜೇಷ್ಠತಾ ಘಟಕ ಎಂದರೆ ಒಂದು ಹುದ್ದೆಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರದ ಕಾರ್ಯವ್ಯಾಪ್ತಿ".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವೀರಭದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE

ಅನುಬಂಧ - ಬಿ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಅಧಿಕಾರಿ / ನೌಕರರ ವರ್ಗಾವಣೆಗಳ ಕುರಿತು ಆದೇಶ.

**ಓದಲಾಗಿದೆ:**
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 93 ಪಿಪಿಎಸ್ 2022, ದಿನಾಂಕ:22.02.2023.
2) ಪೊಲೀಸ್ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪ್ರಸ್ತಾವನೆ ಸಂ: ಹೆಚ್‌ಎಂಆರ್-2(1)/270/2022-23, ದಿನಾಂಕ:20.06.2024

* * * * *

**ಪ್ರಸ್ತಾವನೆ:-**

ಮೇಲೆ ಓದಲಾದ (1)ರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿನ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಸಿವಿಲ್/ಸಿಎಆರ್/ಡಿಎಆರ್) ಸಹಾಯಕ ಪೊಲೀಸ್ ಸಬ್ ಇನ್ಸ್ ಪೆಕ್ಟರ್ / ಹೆಡ್ ಕಾನ್ಸ್‌ಟೇಬಲ್ (ಸಿವಿಲ್/ಸಿಎಆರ್/ಡಿಎಆರ್), ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್/ಸಿಎಆರ್/ಡಿಎಆರ್) ಹಾಗೂ ಲಿಪಿಕ ವೃಂದಗಳಾದ ಪ್ರಥಮ ದರ್ಜೆ ಸಹಾಯಕ / ದ್ವಿತೀಯ ದರ್ಜೆ ಸಹಾಯಕ / ದಲಾಯತ್ ಹಾಗೂ ಗ್ರೂಪ್-ಡಿ ವೃಂದದ ಸಿಬ್ಬಂದಿಗಳನ್ನು ಪೊಲೀಸ್ ಇಲಾಖೆಯ ಒಂದು ಜಿಲ್ಲಾ / ಘಟಕದಿಂದ ಇನ್ನೊಂದು ಜಿಲ್ಲಾ / ಘಟಕಗಳಿಗೆ ಹಾಗೂ ಒಂದು ವಲಯ / ನಗರ ಘಟಕಗಳಿಂದ ಇನ್ನೊಂದು ವಲಯ ಹಾಗೂ ನಗರ ಘಟಕಗಳಿಗೆ ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು-2022 ಅನ್ನು ರಚಿಸಲಾಗಿದೆ.

ಮೇಲೆ ಓದಲಾದ (2)ರ ಪ್ರಸ್ತಾವನೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು 2022ರ ಅನುಸಾರ ಪೊಲೀಸ್ ಇಲಾಖೆಯ ಸಿಬ್ಬಂದಿಗಳನ್ನು ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆ ಮಾಡಲು ಪೂರಕವಾಗುವಂತೆ ಮಾರ್ಗಸೂಚಿಗಳನ್ನು ನಿಗದಿಪಡಿಸಲು ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು ಸರ್ಕಾರವನ್ನು ಕೋರಿರುತ್ತಾರೆ.

ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರೀಕ್ಷಕರು ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರ ಆದೇಶ ಸಂಖ್ಯೆ: ಒಇ/93/ಪಿಪಿಎಸ್/2022 ಬೆಂಗಳೂರು, ದಿನಾಂಕ: 15.07.2024**

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಸಿಬ್ಬಂದಿಗಳ ವರ್ಗಾವಣೆ ಸಂಬಂಧ ಹೊರಡಿಸಲಾಗಿರುವ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) (ವಿಶೇಷ) ನಿಯಮಗಳು, 2022ರ ಅನುಸಾರ ಕರ್ನಾಟಕ ಪೊಲೀಸ್ ಇಲಾಖೆಯ ಸಿಬ್ಬಂದಿಗಳನ್ನು ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ ವರ್ಗಾವಣೆ ಮಾಡಲು ಈ ಕೆಳಕಂಡ ಮಾರ್ಗ ಸೂಚಿಗಳನ್ನು ಅಳವಡಿಸಿಕೊಂಡು ವರ್ಗಾವಣೆ ಪ್ರಕ್ರಿಯೆಗಳನ್ನು ಕೈಗೊಳ್ಳಲು ಆದೇಶಿಸಿದೆ:-

1) ಅಂತರ್ ಜಿಲ್ಲಾ / ಘಟಕ ವರ್ಗಾವಣೆ ಕುರಿತಂತೆ ಇಲಾಖೆಯಿಂದ ರೂಪಿಸಲಾಗಿರುವ ಅಧಿಕೃತ ಆನ್ ಲೈನ್ ಪೋರ್ಟಲ್‌ನಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.

2) ವರ್ಗಾವಣೆ ಬಯಸುವ ಘಟಕದಲ್ಲಿನ ಪ್ರತಿ ವೃಂದದಲ್ಲಿನ ಒಟ್ಟು ರಿಕ್ತಸ್ಥಾನವು ಆ ಘಟಕದಿಂದ ಇತರ ಘಟಕಗಳಿಗೆ ವರ್ಗಾವಣೆ ಹೊಂದಿ ಹೋಗುವ ಸಿಬ್ಬಂದಿಗಳ ರಿಕ್ತಸ್ಥಾನ ಸೇರಿದಂತೆ ಶೇಕಡಾ 15ಕ್ಕಿಂತ ಹೆಚ್ಚಿರಬಾರದು.

3) ಅಂತರ್ ಜಿಲ್ಲಾ/ಘಟಕ ವರ್ಗಾವಣೆಗೆ ಸಂಪೂರ್ಣವಾಗಿ ಪ್ರತಿ ವೃಂದದಲ್ಲಿನ ಸೇವಾ ಜೇಷ್ಠತೆಯ ಆಧಾರದ ಮೇಲೆ ಮಾತ್ರ ಮೇಲ್ಕಂಡ ಶೇಕಡವಾರು ಪ್ರಮಾಣದಲ್ಲಿ ಅಧಿಕೃತ ಪೋರ್ಟಲ್ ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸುವುದು.

4) ಅದರಲ್ಲಿ ಮೊದಲನೇ ಆದ್ಯತೆ ಪತಿ-ಪತ್ನಿ ಪ್ರಕರಣಕ್ಕೆ ನೀಡಲಾಗುವುದು.

5) ಎಲ್ಲಾ ವೃಂದದ ವರ್ಗಾವಣೆಗಳಿಗೆ ಸಂಬಂಧಪಟ್ಟ ಉಭಯ ಘಟಕಾಧಿಕಾರಿಗಳ ನಿರಾಕ್ಷೇಪಣಾ ಪತ್ರವು ಕಡ್ಡಾಯವಾಗಿರುತ್ತದೆ.

6) ಇಲಾಖಾ ವಿಚಾರಣೆ/ ಕ್ರಿಮಿನಲ್ / ನ್ಯಾಯಾಂಗ ನಡವಳಿಗಳನ್ನು ಪ್ರಾರಂಭಿಸಲಾಗಿದ್ದಲ್ಲಿ ಅಥವಾ ಬಾಕಿ ಇದ್ದಲ್ಲಿ ಅಥವಾ ಅಭಿಯೋಜನೆಗೊಳಿಸಲು ಉದ್ದೇಶಿಸಿದ್ದಲ್ಲಿ ಅಂತಹ ಸಿಬ್ಬಂದಿಗಳು ವರ್ಗಾವಣೆಗೆ ಅರ್ಹರಿರುವುದಿಲ್ಲ.

7) ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ ಹಾಗೂ ಘಟಕದಲ್ಲಿ ಕನಿಷ್ಠ 7 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಸಿಬ್ಬಂದಿಗಳು (ಮುಂಬಡ್ತಿ ಹುದ್ದೆಯಲ್ಲಿರುವ ಸಿಬ್ಬಂದಿಗಳು ಸೇರಿದಂತೆ) ಮಾತ್ರ ವರ್ಗಾವಣೆಗೆ ಅರ್ಹರಾಗುತ್ತಾರೆ (ಮಾಜಿ ಸೈನಿಕ ಪ್ರಕರಣದಲ್ಲಿ ಕನಿಷ್ಟ 3 ವರ್ಷಗಳು).

8) ಅಂತರ್ ಜಿಲ್ಲಾ/ಘಟಕ ವರ್ಗಾವಣೆಯನ್ನು ಕೋರಿಕೆ ಮೇಲೆ ಮಾಡುವುದರಿಂದ ಜೇಷ್ಠತೆಯನ್ನು ಬಿಟ್ಟುಕೊಡುವ ಷರತ್ತಿಗೊಳಪಟ್ಟು ಮಾಡಲಾಗುವುದು. ಅಂತಹ ನೌಕರರ ಜೇಷ್ಠತೆಯನ್ನು ವರ್ಗಾವಣೆಗೊಂಡ ಘಟಕದಲ್ಲಿನ ಕೇಡರ್‌ನ ಕೊನೆಯವರಾಗಿ ಪರಿಗಣಿಸಲಾಗುವುದು.

9) ಸರ್ಕಾರಿ ನೌಕರನು ಸೇವೆಗೆ ಸೇರುವಾಗ ಕೆ.ಜಿ.ಐ.ಡಿ ಇಲಾಖೆಯಿಂದ ನೀಡಿದ ಮೊದಲ ಕೆ.ಜಿ.ಐ.ಡಿ ಸಂಖ್ಯೆಯನ್ನು ಸದರಿ ನೌಕರನ ಅಧಿಕೃತ ಐಡಿಯಾಗಿ (Employee ID) ಪರಿಗಣಿಸಿದ್ದು, ಸದರಿ ಕೆ.ಜಿ.ಐ.ಡಿ ಸಂಖ್ಯೆಯಿಂದ ಸಲ್ಲಿಸಲಾದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು.

10) ಒಂದಕ್ಕಿಂತ ಹೆಚ್ಚು ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಮೊದಲ ಅಧಿಕೃತ ಅರ್ಜಿಯನ್ನು ಮಾತ್ರ ವರ್ಗಾವಣೆಗೆ ಪರಿಗಣಿಸಲಾಗುವುದು.

11) ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದೇ ಅರ್ಜಿಗಳನ್ನು ತಿರಸ್ಕರಿಸಬಹುದು ಅಥವಾ ಪರಿಗಣಿಸದೇ ಇರಬಹುದು.

12) ಅಂತರ ಜಿಲ್ಲಾ/ಅಂತರ ಜೇಷ್ಠತಾ ಘಟಕ ವರ್ಗಾವಣೆಯನ್ನು ಸಾಮಾನ್ಯ ವರ್ಗಾವಣೆಯ ಸಂದರ್ಭದಲ್ಲಿ ಮಾತ್ರ ಮಾಡಲಾಗುವುದು.

13) ಪೊಲೀಸ್ ಸಿಬ್ಬಂದಿಗಳನ್ನು ಒಂದು ಜೇಷ್ಠತಾ ಘಟಕದಿಂದ ಮತ್ತೊಂದು ಜೇಷ್ಠತಾ ಘಟಕಕ್ಕೆ ವರ್ಗಾವಣೆ ಮಾಡಲು ಪೊಲೀಸ್ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರು ಮಾತ್ರ ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

14) ಈ ಆದೇಶ ಜಾರಿಗೆ ಬಂದ ದಿನಾಂಕದಿಂದ ಈ ಕುರಿತಂತೆ ಹೊರಡಿಸಲಾದ ಈ ಹಿಂದಿನ ಆದೇಶ/ಸುತ್ತೋಲೆಗಳು ವ್ಯತಿರಿಕ್ತ ಸಂದರ್ಭಗಳಲ್ಲಿ ಮಾರ್ಪಡುಗೊಳ್ಳುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Shyama Holla 15/7/24

**(ಜಿ. ಶ್ಯಾಮ ಹೊಳ್ಳ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು-ಬಿ)

**ಇವರಿಗೆ,**

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಪೊಲೀಸ್ ಪ್ರಧಾನ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

**ಪ್ರತಿಗಳು :**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿಸಿಎಎಸ್), ಒಳಾಡಳಿತ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ವಿಶೇಷ ಕಾರ್ಯದರ್ಶಿ (ಪೊಲೀಸ್ ಸೇವೆಗಳು), ಒಳಾಡಳಿತ ಇಲಾಖೆ, ರವರ ಆಪ್ತ ಕಾರ್ಯದರ್ಶಿಗಳು .
4. ಹೆಚ್ಚುವರಿ ಪ್ರತಿಗಳು / ಶಾಖಾರಕ್ಷಾ ಕಡತ